# ಊರ ಓಣಿಗಳ ತುಂಬ ಪ್ರೇಮದ ಸುಗಂಧ

ಅರಣ್ಯರೋದನದ ನಡುವೆ ನಡೆಯುವ ಒಬ್ಬಂಟಿ ಪಯಣಿಗನಂತೆ ಸಮಯ ಇಂಚಿಂಚೇ ಸರಿಯುತ್ತಿತ್ತು. ಅತ್ತ ಎದ್ದ ಬಾರೆಯಲ್ಲಿ ನರಿಗಳು ಊಳಿಡುತ್ತಿದ್ದವು. ಊರ ನಾಯಿಗಳು ಬೊಗಳುತ್ತಿದ್ದವು. ರಾತ್ರಿ ಕಾಯಿಗಳ್ಳರು, ಅದೆಲ್ಲೆಲ್ಲೋ ಕೆಲಸಕ್ಕೆ ಹೋದವರು ಅವರವರ ಕಾಯಕ ಮುಗಿಸಿ ಕಟ್ಟೆಯ ಸರಹದ್ದಿನಲ್ಲಿ ಏನೇನೋ ಮಾತುಕತೆ ಆಡಿಕೊಂಡು ನಿಂತು ಬೀಡಿ ಹಚ್ಚಿದ್ದರು. ಮತ್ಯಾರೋ ಬರುತ್ತಿದ್ದರು. ಇನ್ಯಾರೋ ಅತ್ತ ಹೋಗುತ್ತಿದ್ದರು. ಗೋಣಿ ಮರ, ಗೋರ್ಕಲ್ಲು, ಕಡಾಣಿ, ನರಿ – ಇವುಗಳಿಗೆ ಹಗಲು ರಾತ್ರಿಗಳು ಕಣ್ಣಾಮುಚ್ಚಾಲೆಯಂತೆ ಕಂಡರೂ, ಇವ್ಯಾವಕ್ಕೂ ಹಗಲು ಬೇಕಿರಲಿಲ್ಲ. ಮಸುಕಾಗಿ ಹೋಗುತ್ತಿರುವ ಚಂದ್ರನನ್ನು ಕಂಡು ಮರುಗಿದವು. ಎತ್ತುಗಳು ಮುಗ್ಗರಿಸಿದಂತೆ ಕಡಾಣಿ ಬೆಚ್ಚಿತ್ತು. ಮಲ್ಲನ ಏಟಿಗೆ ಎತ್ತುಗಳು ದಾರಿ ತಪ್ಪಿ ಓಡಿ ಬರುತ್ತಿರುವಂತೆ ಮರಕ್ಕೆ ಗಾಬರಿಯಾಯಿತು. ಒಟ್ಟಾರೆ ಈ ಜೀವಗಳನ್ನು ಬೆಳಕು ಹಿಂಡುತ್ತಿತ್ತು.

* * *

ದ್ಯಾವಮ್ಮ ಮಾತ್ರ ಇದರ ಯಾವ ಗೊಡವೆಯೂ ಇಲ್ಲದೆ ‘ಲೇ ಪಾಪ, ಎಲ್ಲಿದ್ದೀಯ ಬಾರೋ’ ಎನ್ನುತ್ತ ಕಾಣದ ಮಗನನ್ನು ನಿಧಿಯಂತೆ ಹುಡುಕುತ್ತಿದ್ದಳು. ಎಂದೂ ಯಾರಲ್ಲೂ ಕೈ ಚಾಚದ ಇವಳು ಈಗ ‘ಅವ್ವಾ ನನ್ನುಡ್ಗ ಹಸ್ಕಂಡು ಬರುತ್ತೆ ಏನಾದರೂ ಇದ್ರೆ ಕೊಡವ್ವ’ ಎಂದು ಕೇಳುತ್ತಿದ್ದಳು. ಬೀದಿಯಲ್ಲಿರುವವರ ಕರುಳು ಚುರುಕ್ ಅಂದು ಏನನ್ನಾದರೂ ಕೊಟ್ಟು ‘ನೀನೂ ತಿನ್ನು, ನಿನ್ನುಡುಗ್ಗೂ ತಕ್ಕಂಡೋಗು’ ಎಂದು ಇಂಗಾದರೂ ಅವಳು ತಿನ್ನಲೆಂದು ಉಪಾಯ ಮಾಡುತ್ತಿದ್ದರು. ಆ ಮಾತೇಳಿದ್ರೆ ‘ನಿನ್ನ ಮನೆಲೆ ಊಟ ಬೇಡ, ಹೋಗು’ ಎಂದು ಹೋಗೇ ಬಿಡುತ್ತಿದ್ದಳು. ಆಗ ಆಚಾರರ ಸೊಸೆ ದ್ಯಾವಮ್ಮನನ್ನು ಕರೆದು ಏನನ್ನಾದರೂ ಕೊಟ್ಟು ತಿನ್ನಿಸುತ್ತಿದ್ದಳು. ದ್ಯಾವಕ್ಕ ಇವಳೊಬ್ಬಳ ಮಾತನ್ನು ಮಾತ್ರ ಆಲಿಸುತ್ತಿದ್ದಳು.

ನಿಂಗಣ್ಣನು ಅಲ್ಲೇ ನಿಂತು ಎಲ್ಲ ನೋಡಿದ. ಬೀಡಿ ಹಚ್ಚಿ ದಂ ಎಳೆದ. ರಾತ್ರಿಯ ಘಟನೆ, ಬೆಳಿಗ್ಗೆಯ ಘಟನೆ ಅವನ ತಲೆಯಲ್ಲಿ ಗಿರಕಿ ಹೊಡೆಯುತ್ತಿತ್ತು. ಆ ಘಟನೆ ನಿಂಗಣ್ಣನ ಮೈಯನ್ನೆಲ್ಲ ಹಿಂಡುತ್ತಿತ್ತು. ಅಂಥ ಆಳು ಒಂದರೆಘಳಿಗೆಯಲ್ಲಿ ಹೀಗಾಗಿ ಹೋದ. ಮಲ್ಲನ ಮನೆ ಹತ್ತಿರ ಯಾರ್ಯಾರೋ ಹೋದರು, ಬಂದರು. ಸಂಜೆ ಮಲೆಯಮ್ಮ, ಊರ ಗಂಡಸರು, ಆಸ್ಪತ್ರೆಯ ವರ್ತಮಾನ ಏನಾದರೂ ತಿಳಿಯುತ್ತಾ ಎಂದು ಮಲ್ಲನ ಮನೆಯತ್ತ ಹೋದರು. ಅಂಥಾ ಯಾವ ಸುದ್ದಿಯೂ ಅಲ್ಲಿಗೆ ಬಂದಿರಲಿಲ್ಲ.

ಮಲ್ಲನ ಮನೆಯ ಹತ್ತಿರ ಸಂಬಂಧಿಕರು, ಜಾತಿಯ ಒಂದಷ್ಟು ಹುಡುಗರು ಸೇರಿದ್ದರು. ನಂಜನು ಅವರ ಮನೆ ಕೆಲಸ ಮಾಡಿ ಅನುಭವ ಇದ್ದುದ್ದರಿಂದ ಜಗಲಿಯವರೆಗೂ ಹೋಗಿದ್ದ. ನಿಂಗಣ್ಣನು ಮಾದಿಗ ಎನ್ನುವ ಸಂಕೋಚದಲ್ಲಿ ಅವರ ಬಚ್ಚಲು ಮನೆಯ ಮೂಲೆಯಲ್ಲಿ ನಿಂತಿದ್ದ. ಅಲ್ಲಿ ತಲೆಗೊಂದೊಂದು ಮಾತು. ‘ಅಯ್ಯೋ ಎಂಥಾ ಆಳು ಎತ್ತಿ ಮಗಚಾಕ್ದಂಗಾಯ್ತು.’ ‘ಅಂಗೇ ಸುಂಟರ್ಗಾಳಿ ಎದ್ದಂಗಾಯ್ತು.’ ಈ ಮನೆ ಬೆಳಕು ಚಂದ್ರ, ಇದ್ದಕ್ಕಿದ್ದಂತೆ ಹೋಗಿದ್ದಕ್ಕೆ ಸೋಜಿಗಪಟ್ಟರು ಜನ. ಮಾತಿನ ಮಧ್ಯ ಅದ್ಯಾರೋ ಟೀ ತಂದುಕೊಟ್ಟರು. ಲೋಟ ಬಳಸಿ ಬಿಸಾಡುವುದರಿಂದ ಅವನಿಗೆ ಆ ಲೋಟ ತಗಾ, ಇವನಿಗೆ ಈ ಲೋಟ ತಗಾ ಅನ್ನುವ ಮಾತು ಅಲ್ಲಿ ಬರಲಿಲ್ಲ.

ಟೀ ಕುಡಿದ ಲೋಟ ಅಲ್ಲೇ ಚರಂಡಿಯಲ್ಲಿ ಎಸೆದು ಅಲ್ಲಿ ಸೇರಿದ್ದವರು ಅತ್ತಿತ್ತ ಹೋದರು. ಆ ರಸ್ತೆಯಲ್ಲಿ ನಡೆದಾಡುವ ಹೆಜ್ಜೆ ಸಪ್ಪಳಕ್ಕೆ ಎರಡೂ ಕಣ್ಣುಗಳೂ ಕಾಣದ ಕೆಂಚಜ್ಜ ವಯೋಮಾನದ ಸಹಜ ಕಾಯಿಲೆಯಿಂದ ನರಳುತ್ತಾ ಬಳಲುತ್ತಾ ಹಾಸಿಗೆಯಲ್ಲೇ ಮೇಲೇಳಲಾಗದಿದ್ದರೂ ಅತ್ತಿತ್ತ ಓಡಾಡುವವರ ಸದ್ದು ಗದ್ದಲ ಕೇಳಿ ‘ಹೋಯ್ ಯಾರಪ್ಪಾ ಅದು’ ಅಂದು ಕೂಗುತ್ತಾ... ‘ಏನಾಯ್ತು...’ ಎಂದು ಮಲಗಿದ್ದಲ್ಲಿಯೇ ಕೂಗಿ ಕೂಗಿ ಕೇಳುತ್ತಿದ್ದ. ಅಸಹಜವಾಗಿ ನಡೆದ ಈ ಘಟನೆಯಲ್ಲಿ ಅತ್ತಿಂದ ಇತ್ತಿಂದ ಎದ್ದು ಓಡಾಡಿ ಓಡಾಡಿ ಏನು ಎತ್ತ ತಿಳಿಯದೆ ಸುಸ್ತಾಗಿ ಹೋಗಿದ್ದ ಕೆಂಚಜ್ಜನ ಮಗ ಚಿಕ್ಕ ಅವರಪ್ಪನ ಕೂಗಾಟ ಅರಚಾಟ ಕೇಳಿ ರೋಸಿದವನಂತೆ ‘ಸುಮ್ನೆ ಮಲಿಕಳೋ... ಅಲ್ಲಿಗೆ ಬಂದ್ರೆ ನಾನೇನಿಲ್ಲ, ಅಂಗೆ ಕತ್ ಮಿಸ್ಕಿ ಸಾಯ್ಸಿಬಿಡ್ತೀನಿ’ ಎಂದು ಗದರಿದ. ಮಗನ ಏರು

